KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 3/1/2021

# ಲಸಿಕೆ ವಿಂಡೋಸ್ ಓಪನ್

## ಪುಣೆಯ ಸೀರಮ್ ಸಂಸ್ಥೆಯ ಆಕ್ಸ್‌ಫರ್ಡ್-ಆಸ್ಟ್ರಾಜೆನೆಕಾ ಲಸಿಕೆಗೆ ತಜ್ಞರ ಸಮಿತಿ ಒಪ್ಪಿಗೆ

## ಡಿಸಿಜಿಐಗೆ ಶಿಫಾರಸು ಮಾಡಿದ ಸಮಿತಿ । ಇಂದಿನಿಂದಲೇ ಲಸಿಕೆಯ ಸಾಗಣೆ?

ನವದೆಹಲಿ: ನಿರೀಕ್ಷೆಯಂತೆಯೇ 2021 ಹೊಸ ಲಸಿಕೆಯ ಭರವಸೆಯೊಂದಿಗೆ ಆರಂಭವಾಗಿದೆ. ಪುಣೆಯ ಸೀರಮ್ ಸಂಸ್ಥೆಯಲ್ಲಿ ಅಭಿವೃದ್ಧಿಪಡಿಸಲಾಗಿರುವ ಆಕ್ಸ್‌ಫರ್ಡ್-ಆಸ್ಟ್ರಾಜೆನೆಕಾ ಲಸಿಕೆ ಕೋವಿಶೀಲ್ಡ್‌ಗೆ ಭಾರತ ಔಷಧ ನಿಯಂತ್ರಣ ಪ್ರಾಧಿಕಾರ(ಡಿಸಿಜಿಐ) ನೇಮಿಸಿದ್ದ ಪರಿಶೀಲನಾ ಸಮಿತಿ ಒಪ್ಪಿಗೆ ನೀಡಿದೆ. ಕೆಲವು ಷರತ್ತುಗಳ ಜತೆಗೆ ತುರ್ತು ಬಳಕೆಗೆ ಅವಕಾಶ ನೀಡಬಹುದು ಎಂದು ಸಮಿತಿ ಡಿಸಿಜಿಐಗೆ ಶಿಫಾರಸು ಮಾಡಿದೆ.

ಇದಷ್ಟೇ ಅಲ್ಲ, ಸಂಪೂರ್ಣವಾಗಿ ಸ್ವದೇಶಿ ಸಂಶೋಧನೆಯೊಂದಿಗೆ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸುತ್ತಿರುವ ಕೋವ್ಯಾಕ್ಸಿನ್‌ಗೂ ಇದೇ ಸಮಿತಿ ಸದ್ಯದಲ್ಲೇ ಒಪ್ಪಿಗೆ ನೀಡುವ ಸಾಧ್ಯತೆ ಇದೆ. ಶುಕ್ರವಾರ ನಡೆದ ವಿಷಯ ತಜ್ಞರ ಸಭೆಯಲ್ಲಿ ಈ ಎರಡೂ ಲಸಿಕೆಗಳ ಬಗ್ಗೆ ಚರ್ಚಿಸಲಾಗಿದ್ದು, ಮೊದಲಿಗೆ ಕೋವಿಶೀಲ್ಡ್‌ಗೆ ಒಪ್ಪಿಗೆ ನೀಡಲಾಗಿದೆ. ಇದರ ಜತೆಯಲ್ಲಿ ಫೈಜರ್ ಲಸಿಕೆ ಬಗ್ಗೆಯೂ ಚರ್ಚೆಗೆ ಬಂದಿದ್ದು, ತಜ್ಞರ ಸಮಿತಿ ಇನ್ನಷ್ಟು ದತ್ತಾಂಶಗಳನ್ನು ಕೇಳಿದೆ.

ಲಸಿಕೆ ಸಮಾಚಾರ

ಸದ್ಯ ಆಸ್ಟ್ರಾಜೆನೆಕಾ ಲಸಿಕೆಗೆ ಬ್ರಿಟನ್ ಮತ್ತು ಅರ್ಜೆಂಟೀನ ದೇಶಗಳು ಮಾತ್ರ ಒಪ್ಪಿಗೆ ನೀಡಿವೆ. ಭಾರತ ಮೂರನೇ ದೇಶವಾಗಿದ್ದು, ಸದ್ಯದಲ್ಲಿಯೇ ಆದ್ಯತಾ ನಾಗರಿಕರಿಗೆ ಲಸಿಕೆ ನೀಡುವ ಪ್ರಕ್ರಿಯೆ ಶುರು ಮಾಡಲಿದೆ.

ರಾಯಿಟರ್ಸ್ ಸುದ್ದಿ ಸಂಸ್ಥೆಯ ವರದಿಗಳ ಪ್ರಕಾರ, ಕೋವಿಶೀಲ್ಡ್‌ಗೆ ಡಿಸಿಜಿಐ ಕೂಡ ಈಗಾಗಲೇ ಒಪ್ಪಿಗೆ ನೀಡಿದ್ದು, ಅಧಿಕೃತ ಘೋಷಣೆಯೊಂದೇ ಬಾಕಿ ಉಳಿದಿದೆ. ಇದರ ಜತೆಗೆ ಸೀರಮ್ ಸಂಸ್ಥೆಯು ಶನಿವಾರ ಬೆಳಗ್ಗೆಯಿಂದಲೇ ದೇಶದ ಶೀತಾಗಾರಗಳಿಗೆ ಲಸಿಕೆಯನ್ನು ಸಾಗಣೆ ಮಾಡಲಾಗುವುದು ಎಂದೂ ಹೇಳಿದೆ. ಈ ಎಲ್ಲಾ ಬೆಳವಣಿಗೆಗಳನ್ನು ನೋಡಿದರೆ, ಮುಂದಿನ ಬುಧವಾರದಿಂದಲೇ ದೇಶದಲ್ಲಿ ಲಸಿಕೆ ಪ್ರಯೋಗ ಶುರುವಾಗಲಿದೆ ಎಂದೇ ಹೇಳಲಾಗುತ್ತಿದೆ. ಆದರೆ, ಟೈಮ್ಸ್ ಆಫ್ ಇಂಡಿಯಾ ವೆಬ್‌ಸೈಟ್ ಪ್ರಕಾರ, ಇನ್ನೂ ಎಂಟತ್ತು ದಿನಗಳಲ್ಲಿ ದೇಶಾದ್ಯಂತ ಲಸಿಕೆ ವಿತರಣೆ ಪ್ರಕ್ರಿಯೆ ಶುರುವಾಗಲಿದೆ ಎಂದು ಹೇಳಲಾಗುತ್ತಿದೆ.

### ಲಸಿಕೆ ವಿತರಣೆ ಹೇಗೆ, ಎತ್ತ?

**2.30** ಲಕ್ಷ - ಲಸಿಕೆ ನೀಡುವವರು

**50,000** ಲಸಿಕಾ ಕೇಂದ್ರಗಳು

**30** ಕೋಟಿ ಲಸಿಕೆಪಡೆಯಲಿರುವ ಆದ್ಯತಾವಲಯ




**ಲಸಿಕೆಯ ದರ (ಭಾರತ ಸರ್ಕಾರಕ್ಕೆ)**

ಪ್ರತಿ ಡೋಸ್‌ಗೆ **219** ರೂ.

ಪ್ರತಿ ವ್ಯಕ್ತಿಗೆ **438** ರೂ.

ಖಾಸಗಿ ಮಾರುಕಟ್ಟೆಯಲ್ಲಿ ಪ್ರತಿ ವ್ಯಕ್ತಿಗೆ **700** ರಿಂದ **800** ರೂ.

### 16 ಕೇಂದ್ರಗಳಲ್ಲಿ ಡ್ರೈರನ್

ಬೆಂಗಳೂರು: ಐದು ಜಿಲ್ಲೆಗಳ 16 ಆರೋಗ್ಯ ಕೇಂದ್ರಗಳಲ್ಲಿ ಶನಿವಾರ ಬೆಳಗ್ಗೆ ಕೊರೊನಾ ಲಸಿಕೆ ಡ್ರೈರನ್ ಜರುಗಲಿದೆ. ಬೆಂಗಳೂರು, ಕಲಬುರಗಿ, ಶಿವಮೊಗ್ಗ, ಬೆಳಗಾವಿ, ಮೈಸೂರಿನಲ್ಲಿ ಡ್ರೈರನ್ ನಡೆಯಲಿದೆ. ಪ್ರತಿ ಜಿಲ್ಲೆಯಲ್ಲಿ ತಲಾ 3 ಆರೋಗ್ಯ ಕೇಂದ್ರಗಳನ್ನು ಆಯ್ಕೆ ಮಾಡಲಾಗಿದ್ದು, ಒಂದು ಆರೋಗ್ಯ ಕೇಂದ್ರದಲ್ಲಿ ಐವರು ಲಸಿಕೀಕರಣ ಸಿಬ್ಬಂದಿ ಇರಲಿದ್ದಾರೆ. ತಲಾ 25 ಪ್ರಾತ್ಯಕ್ಷಿಕೆ ಫಲಾನುಭವಿಗಳನ್ನು ನಿಗದಿಪಡಿಸಲಾಗಿದೆ. ಡ್ರೈರನ್ ಕುರಿತು ಶುಕ್ರವಾರ ಮಧ್ಯಾಹ್ನ ಆರೋಗ್ಯ ಇಲಾಖೆಯ 100 ಸಿಬ್ಬಂದಿಗೆ ಕೇಂದ್ರ ಸರ್ಕಾರ ಈಗಾಗಲೇ ತರಬೇತಿ ನೀಡಿದೆ.

### ಆರೋಗ್ಯ ಕೇಂದ್ರಗಳು

- ಬೆಂಗಳೂರು - ಕಾಮಾಕ್ಷಿ ಪಾಳ್ಯ, ವಿದ್ಯಾಪೀಠ, ಯಲಹಂಕ, ಆನೇಕಲ್ ತಾಲೂಕಿನ ಹಾರಗದ್ದೆ.
- ಬೆಳಗಾವಿ - ಒಂಟಮುರಿ ಕಾಲೋನಿ ಪ್ರಾಥಮಿಕ ಆರೋಗ್ಯ ಕೇಂದ್ರ, ಹುಕ್ಕೇರಿ ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಕಿತ್ತೂರು,
- ಮೈಸೂರು - ಜಯನಗರ, ಕೆ.ಆರ್. ನಗರ ತಾಲೂಕು ಆಸ್ಪತ್ರೆ, ಹುಣಸೂರು ತಾಲೂಕು ಬಿಳಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರ.
- ಕಲಬುರಗಿ - ಅಶೋಕನಗರ, ಜೇವರ್ಗಿ ತಾಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಔರಾದ್.
- ಶಿವಮೊಗ್ಗ - ಮೆಗ್ಗಾನ್ ಆಸ್ಪತ್ರೆ, ಶಿಕಾರಿಪುರ ತಾಲೂಕು ಆಸ್ಪತ್ರೆ, ಆಂತರಗಂಗೆ ಆರೋಗ್ಯ ಕೇಂದ್ರ

### ಸ್ಥಳೀಯರಿಗೂ ರೂಪಾಂತರಿ

ಬೆಂಗಳೂರು: ರಾಜ್ಯದಲ್ಲಿ ಇದೇ ಮೊದಲ ಬಾರಿ ಇಂಗ್ಲೆಂಡ್ ಪ್ರಯಾಣಿಕರ ಸಂಪರ್ಕ ಹೊಂದಿದ್ದ ಸ್ಥಳೀಯ ವೃದ್ಧೆಯೊಬ್ಬರಲ್ಲಿ(73) ಬ್ರಿಟನ್ ರೂಪಾಂತರ ಕೊರೊನಾ ವೈರಸ್ ಪತ್ತೆಯಾಗಿದೆ. ಇದರೊಂದಿಗೆ ಶುಕ್ರವಾರ ಮೂರು ರೂಪಾಂತರ ಕೊರೊನಾ ವೈರಸ್ ಪ್ರಕರಣಗಳು ದೃಢಪಟ್ಟಿದ್ದು, ಒಟ್ಟಾರೆ ಪ್ರಕರಣಗಳ ಸಂಖ್ಯೆ 10ಕ್ಕೇರಿಕೆಯಾಗಿದೆ. ವಿಚಿತ್ರವೆಂದರೆ, ಇದೇ ಮೊದಲ ಬಾರಿಗೆ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸದ ಸ್ಥಳೀಯರೊಬ್ಬರಲ್ಲಿ ಈ ವೈರಸ್ ಪತ್ತೆಯಾಗಿದೆ. ತಂದೆ ಅನಾರೋಗ್ಯ ಹಿನ್ನೆಲೆಯಲ್ಲಿ ಡಿ.19 ರಂದು 40 ವರ್ಷದ ಮಹಿಳೆಯು ರಾಜಾಜಿನಗರಕ್ಕೆ ಬಂದಿದ್ದರು. ಡಿ.24ಕ್ಕೆ ಅವರಲ್ಲಿ ಸೋಂಕು ದೃಢಪಟ್ಟಿದ್ದು, ಪ್ರಾಥಮಿಕ ಸಂಪರ್ಕದಲ್ಲಿದ್ದ 73 ವರ್ಷದ ತಾಯಿಯನ್ನು ಪರೀಕ್ಷೆಗೊಳಪಡಿಸಲಾಗಿತ್ತು.